ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ
ನ್ಯಾಯಾಲಯದಲ್ಲಿ, ನ.ರಾ.ಪುರ.
ಎಂ ವಿ ಸಿ ನಂಃ 339/2025

ಪಿ ಡಬ್ಲ್ಯು ಃ-02

ಸಾಕ್ಷಿದಾರರ ಹೆಸರು ಃ ಡಾ.ವಿಜಯ್ ಬಿ ಟಿ
ತಂದೆಯ ಹೆಸರು ಃ ಬಿ ಕೆ ತಿಪ್ಪೇಸ್ವಾಮಿ
ವಯಸ್ಸು ಃ 43 ವರ್ಷ
ಉದ್ಯೋಗ ಃ ವೈದ್ಯಾಧಿಕಾರಿಗಳು, ಎನ್ ಆರ್ ಪುರ.
ವಾಸಸ್ಥಳ ಃ ಶಿವಮೊಗ್ಗ.

ದಿನಾಂಕಃ 01.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.
ಮುಖ್ಯವಿಚಾರಣೆ ಃ ಅರ್ಜಿದಾರರ ಪರ ಶ್ರೀ K.S.S ವಕೀಲರಿಂದಃ

ನಾನು ಸೆಪ್ಟೆಂಬರ್ 2018 ರಿಂದ ಇಲ್ಲಿಯವರೆಗೆ ನರಸಿಂಹರಾಜಪುರ ಸರ್ಕಾರಿ ಆಸ್ಪತ್ರೆಯಲ್ಲಿ ಕೀಲು ಮತ್ತು ಮೂಳೆ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

1. ದಿಃ 15.05.2025 ರಂದು ಅಪಘಾತದ ಗಾಯಗೊಂಡ ಕಾರಣ ಶ್ರೀಮತಿ ಸರೋಜಾ ಹೆಚ್.ಎಲ್. ಇವರು ಸರ್ಕಾರಿ ಆಸ್ಪತ್ರೆ ಕೊಪ್ಪದಲ್ಲಿ ಚಿಕಿತ್ಸೆ ಪಡೆದು ನಂತರ ಹೆಚ್ಚಿನ ಚಿಕಿತ್ಸೆಗಾಗಿ ಹರ್ಷಲಕ್ಷ್ಮಿ ಆಸ್ಪತ್ರೆ ಕೊಪ್ಪದಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ನಂತರ ಅವರು ಹರ್ಷಲಕ್ಷ್ಮಿ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ ನನ್ನ ಬಳಿ ನಿರಂತರ ಚಿಕಿತ್ಸೆಯನ್ನು ಎನ್ ಆರ್ ಪುರ ಸರ್ಕಾರಿ ಆಸ್ಪತ್ರೆಯಲ್ಲಿ ಪಡೆದುಕೊಂಡಿರುತ್ತಾರೆ. ದಿಃ 15.05.2025 ರಂದು ನಾನು ಅರ್ಜಿದಾರರಿಗೆ ಹರ್ಷಲಕ್ಷ್ಮಿ ಆಸ್ಪತ್ರೆ ಕೊಪ್ಪದಲ್ಲಿ ಶಸ್ತ್ರ ಚಿಕಿತ್ಸೆಗೆ ಒಳಪಡಿಸಿದ್ದು, ಸದರಿಯವರು ಬಲ ಸೊಂಟದ ಬಳಿ ಮೂಳೆ ಮುರಿತ ಉಂಟಾಗಿದ್ದು, ಸದರಿ ಇವರಿಗೆ ಶಸ್ತ್ರ ಚಿಕಿತ್ಸೆ ರಾಡನ್ನು ಅಳವಡಿಸಿರುತ್ತೇನೆ. ನಂತರ ನನ್ನ ಬ ಳಿ ನಿರಂತರ ಚಿಕಿತ್ಸೆ ಪಡೆದುಕೊಂಡು ದಿಃ 06.10.2025 ರಂದು ನಾನು ಅರ್ಜಿದಾರರನ್ನು ಕ್ಷ-ಕಿರಣಕ್ಕೆ ಒಳಪಡಿಸಿ ಅವರಿಗೆ ಅಂಗನ್ಯೂನತಾ ಪ್ರಮಾಣಪತ್ರವನ್ನು ಕೇಂದ್ರ ಸರ್ಕಾರದ ಸೂಚನಾ ನಿಯಮಾವಳಿಯ ಪ್ರಕಾರ ನೀಡಿರುತ್ತೇನೆ. ಸದರಿಯವರಿಗೆ ಉಂಟಾದ ಗಾಯ ತೀವ್ರ ಸ್ವರೂಪದ ಗಾಯವಿದ್ದು, ಸದರಿಯವರು ಶೇಕಡಾ 39% ರಷ್ಟು ಬಲ ತೊಡೆಯ ಮೇಲ್ಭಾಗಕ್ಕೆ ಅಂಗನ್ಯೂನತೆ ಉಂಟಾಗಿರುತ್ತದೆ. ಸದರಿಯವರು ನೆಲದ ಮೇಲೆ ಕುಳಿತುಕೊಳ್ಳಲು ಆಗುವುದಿಲ್ಲ. ಹಾಗೂ ಅವರು ಮೊದಲಿನ ರೀತಿ ಕೃಷಿ ಕೆಲಸ ಮಾಡಲು ಆಗುವುದಿಲ್ಲ ಹಾಗೂ ಮನೆಯ ದೈನಂದಿನ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ.

2. ಸಾಕ್ಷಿಯು ತಾವು ನೀಡಿದ ಅಂಗನ್ಯೂನತಾ ಪ್ರಮಾಣಪತ್ರ ಹಾಜರುಪಡಿಸಿದ್ದು, ಅದನ್ನು ಈಗಾಗಲೇ ನಿಪಿ-63 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-63(ಏ) ಎಂದು ಗುರುತಿಸಲಾಯಿತು. ಸಾಕ್ಷಿಯು 1 X-Ray ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-64 ಎಂದು ಗುರುತಿಸಲಾಯಿತು. ಸಾಕ್ಷಿಯು ಅರ್ಜಿದಾರರಿಗೆ ಸಂಬಂಧಿಸಿದ 03 ಪುಟಗಳ Out patient ಚೀಟಿ ಹಾಜರುಪಡಿಸುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ-65 ರಿಂದ ನಿಪಿ-67 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ **1** ನೇ ಎದುರುದಾರರ ಪರ **S.R.S.** ವಕೀಲರ ಪರವಾಗಿ ಶ್ರೀ **S.P** ವಕೀಲರಿಂದ

1. ಅರ್ಜಿದಾರರು ನನ್ನ ಬಳಿ ಪ್ರಥಮ ಬಾರಿಗೆ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿ. ನಾನು ಅರ್ಜಿದಾರರು ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುವ ಬಗ್ಗೆ ಅವರ ಡಿಶ್ಚಾರ್ಜ್ ಸಮರಿಯನ್ನು ಪರಿಶೀಲನೆ ಮಾಡಿರುತ್ತೇನೆ. ಅರ್ಜಿದಾರರು ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ಗುಣಮುಖರಾಗಿ ಬಿಡುಗಡೆ ಹೊಂದಿರುತ್ತಾರೆ ಎಂದರೆ ಸರಿ. ಅರ್ಜಿದಾರರಿಗೆ ದೈನಂದಿನ ಕೆಲಸ ಮಾಡಲು ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ನೆಲದ ಮೇಲೆ ಮಂಡಿಗಾಲಿನಲ್ಲಿ ಕುಳಿತುಕೊಳ್ಳಲು ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಉಂಟಾದ ಗಾಯದಿಂದ ಸಂಪೂರ್ಣವಾಗಿ ಗುಣಮುಖರಾಗಿರುತ್ತಾರೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಾಮಾನ್ಯ ಸ್ವರೂಪದ ಗಾಯಗಳು ಉಂಟಾಗಿರುತ್ತವೆ ಎಂದರೆ ಸರಿಯಲ್ಲ. ನಾನು ಅಂಗನ್ಯೂನತಾ ಪ್ರಮಾಣಪತ್ರ ಕೊಡುವ ಕಾಲಕ್ಕೆ ಕೇಂದ್ರದ ಸೂಚಾವಳಿ ನಿಯಮಗಳನ್ನು ಪಾಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಮುಂದುವರಿದ ಚಿಕಿತ್ಸೆಗೆ ಹಣದ ಅವಶ್ಯಕತೆ ಇರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರು ನನ್ನ ಬಳಿ ನಿರಂತರವಾಗಿ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ಕೃಷಿ-ಕಾರ್ಮಿಕ ಕೆಲಸ ಮಾಡುವ ಬಗ್ಗೆ ನಾನು ದಾಖಲೆ ಪರಿಶೀಲಿಸುವುದಿಲ್ಲ. ನಾನು ಅರ್ಜಿದಾರರಿಗೆ ಹೆಚ್ಚಿನ ಪರಿಹಾರ ಸಿಗಲಿ ಎಂಬ ಉದ್ದೇಶದಿಂದ ಸುಳ್ಳು ಅಂಗನ್ಯೂನತಾ ಪ್ರಮಾಣಪತ್ರವನ್ನು ನೀಡಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಷ್ಟು ಅರ್ಜಿದಾರರಿಗೆ ಅಂಗನ್ಯೂನತೆ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು **2** ನೇ ಎದುರುದಾರರ ಮತ್ತು ಅವರ ಪರ ವಕೀಲರನ್ನು ಕೂಗಿ ಕರೆಸಲಾಗಿ ಗೈರು ಹಾಜರಿದ್ದು ಹಾಗೂ ತಮ್ಮ ಆಕ್ಷೇಪಣೆಯನ್ನು ಸಲ್ಲಿಸದ ಕಾರಣ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

<u>ಮರುವಿಚಾರಣೆ ಇಲ್ಲ:</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು: ನ.ರಾ.ಪುರ.

ಸಾಕ್ಷಿದಾರರ ಸಹಿ